# ರೇಖೆ ರೇಖೆಗಳಲ್ಲಿ..



ದಿನೇಶ್ ಹೊಳ್ಳ



ಮಂಗಳೂರಿನ ಕಲಾವಿದ ದಿನೇಶ್ ಹೊಳ್ಳ ಚಾರಣಿಗ ಮಾತ್ರವಲ್ಲ ಚಾರಣ ಸಂಘಟಕ ಕೂಡಾ. ತನ್ನ ಸಮಾನ ಮನಸ್ಕ ಗೆಳೆಯರನ್ನು ಪಶ್ಚಿಮ ಘಟ್ಟದ ಕಾಡು ಸುತ್ತಿಸಿ ಬೆಟ್ಟ ಹತ್ತಿಸಿ, ಕಾನನದ ಬಗ್ಗೆ ಕವನ ಬರೆಯುವ ಕಾವ್ಯಾತ್ಮಕ ದೃಷ್ಟಿಯುಳ್ಳಾತ. ದಿನೇಶ್ ಹೊಳ್ಳ ಪಶ್ಚಿಮ ಘಟ್ಟದಿಂದ ಹಿಮಾಲಯದವರೆಗೆ ಕಳೆದ 15 ವರ್ಷಗಳಿಂದ ಚಾರಣ ಮಾಡುತ್ತಾ ಅಲ್ಲಿನ ಗಿರಿ, ಬನ, ಝರಿ, ತೊರೆಯೆಲ್ಲವನ್ನೂ ತನ್ನದೇ ಆದ ದೃಷ್ಟಿಕೋನದಿಂದ ಕಂಡುಕೊಂಡದ್ದು ಅಮೂರ್ತ ರೇಖೆಗಳಿಂದ. ಇದರ ಪರಿಣಾಮಗಳನ್ನು ತನ್ನ ಮನದೊಳಗೆ ಬಾಚುತ್ತಾ, ರೇಖೆಗಳಿಂದ ಗೀಚುತ್ತಾ ಕಲಾಕೃತಿಗಳನ್ನು ನಿರ್ಮಿಸುತ್ತಿರುವವರು.

ಬಿಳಿರಂಗನ ಬೆಟ್ಟಕ್ಕೊಮ್ಮೆ ಚಾರಣ ಹೋಗಿದ್ದಾಗ ಅಲ್ಲಿ ಸೋಲಿಗನೊಬ್ಬ ಮರದ ವಾಟೆಯಿಂದ ಸಂಗೀತ ನುಡಿಸುತ್ತಾ ಆತನ ಮಡದಿ ನಲಿಯುತ್ತಿದ್ದ ದೃಶ್ಯ ದಿನೇಶ್ ಹೊಳ್ಳರ ಮನದೊಳಗೆ ದೃಢವಾಗಿ ಮನೆ ಮಾಡಿತಂತೆ. ಆ ಬಳಿಕ ಇವರ ಕಲಾಕೃತಿಗಳಲ್ಲಿ ನರ್ತಿಸುವ ಗಂಡು ಹೆಣ್ಣಿನ ಚಿತ್ರಗಳೇ ಹೆಚ್ಚು ಮೇಳೈಸುತ್ತಿವೆ. ಸಂಗೀತ ಮತ್ತು ನೃತ್ಯವನ್ನು ತುಂಬಾ ಇಷ್ಟ ಪಡುವ ಇವರಿಗೆ ಕೆ.ಕೆ. ಹೆಬ್ಬಾರರೆಂದರೆ ತುಂಬ ಇಷ್ಟ. ಹೆಬ್ಬಾರರು ಹುಟ್ಟಿದ ದಿನವೇ ಇವರೂ ಹುಟ್ಟಿದ್ದು ಕಾಕತಾಳೀಯವೇ. ಮಂಗಳೂರಿನ ಆರ್ಕಿಡ್ ಆರ್ಟ್ ಗ್ಯಾಲರಿಯಲ್ಲಿ 'ಸ್ಟ್ರೀಮ್ಸ್' ಎಂಬ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿದ ದಿನೇಶ್ ಹೊಳ್ಳ, 40 ರೇಖಾ ಚಿತ್ರಗಳನ್ನು ಪ್ರದರ್ಶಿಸಿದರು. ಹೆಚ್ಚಿನ ಕಲಾಕೃತಿಗಳು ನೃತ್ಯ ಮತ್ತು ಸಂಗೀತದ ವಿವಿಧ ಪ್ರಕಾರಗಳಾಗಿದ್ದು, ಯಕ್ಷಗಾನ ಕುಣಿತ, ಮೀನುಗಾರರ ಬದುಕು, ತಾಯಿ ಮಗುವಿನ ಮಮತೆ, ಒಂಟಿ ನಾರಿಯ ಜಂಟಿ ಪಥ, ಹೊಸಿಲು ಸಂಭಾಷಣೆ, ಭೂತಾರಾಧನಾ ದೊಂದಿ, ಜನಪದ ನೃತ್ಯ ಮುಂತಾದ ದೃಶ್ಯಗಳು ಅಭಿವ್ಯಕ್ತಗೊಂಡಿದ್ದವು. ವಿರಳ ಹಾಗೂ ಸರಳ ರೇಖೆಗಳಲ್ಲಿ ಧಾರಾಳ ವಸ್ತು ವಿಷಯಗಳ ಸಂಯೋಜನೆ ಇವರ ಹೆಚ್ಚುಗಾರಿಕೆ.



ಕಳೆದ ಸೆಪ್ಟೆಂಬರ್‌ನಲ್ಲಿ ಫ್ರಾನ್ಸ್‌ನ ಡೀಪಿ ನಗರದಲ್ಲಿ 'ಗ್ರೇವಿಂಗ್ಸ್' ಎಂಬ ಏಕವ್ಯಕ್ತಿ ಚಿತ್ರ ಕಲಾ ಪ್ರದರ್ಶನ ಮತ್ತು ಇಟೆಲಿಯ ಸಾರ್ವಿಯಾದಲ್ಲಿ ಆರ್ಟ್ ಇವೆಂಟೋ ಇಂಟರ್ ನ್ಯಾಷನಲ್ ಫೆಸ್ಟಿವೆಲ್‌ನಲ್ಲಿ ಹೊಳ್ಳರು ಕಲಾ ಪ್ರಾತ್ಯಕ್ಷಿತೆ ಮಾಡಿದ್ದಾರೆ. ಫ್ರಾನ್ಸ್‌ನ ಡೀಪಿ ನಗರದ ಮೇಯರ್ ಸೆಬಾಸ್ಟಿಯನ್ ಜ್ಯುಮೆಲ್, ದಕ್ಷಿಣ ಕೊರಿಯಾದ ಯೂಸಿಯಾಂಗ್‌ನ ಗವರ್ನರ್ ಕಿಮ್‌ಬಾಕ್‌ಕ್ಯೂ, ಇಟೆಲಿಯ ಖ್ಯಾತ ಕಲಾವಿದ ಕ್ಲಾಡಿಯೊ ಕಫೇಲಿ, ಕೆನಡಾದ ಕಲಾವಿದ ರಾಬರ್ಟ್ ಥೆಪಾನಿಯಾ, ಜರ್ಮನಿಯ ಆಕ್ಸಲ್ ಕೋಸ್ಟ್ರಸ್, ಇಂಗ್ಲೆಂಡ್‌ನ ಬಾಬ್ ಕ್ರಿಸ್ಟೋ, ನೆದರ್ಲ್ಯಾಂಡ್‌ನ ಒಟ್ಟೋ ಓಸನ್, ಆಸ್ಟ್ರೇಲಿಯಾದದ ಲಿಂಡಾ ಸ್ಯಾಂಡರ್ಸ್ ಮುಂತಾದವರು ದಿನೇಶ್ ಹೊಳ್ಳರ ಕಲಾಕೃತಿಗಳನ್ನು ಇಷ್ಟಪಟ್ಟು ಪಡೆದುಕೊಂಡಿದ್ದಾರೆ.

ಅಂತರರಾಷ್ಟ್ರೀಯ ಖ್ಯಾತಿ ಪಡೆದ ಮಂಗಳೂರಿನ 'ಟೀಮ್ ಮಂಗಳೂರು' ಹವ್ಯಾಸೀ ಗಾಳಿಪಟ ತಂಡದಲ್ಲಿ ಹೊಳ್ಳರು ಪ್ರಮುಖ ಕಲಾವಿದರಾಗಿದ್ದು, ಇವರು ವಿನ್ಯಾಸಗೊಳಿಸಿದ 'ಕಥಕ್ಕಳಿ' ಎಂಬ 36 ಅಡಿ ಎತ್ತರದ ಗಾಳಿಪಟವು ಭಾರತದಲ್ಲೇ ಅತಿ ದೊಡ್ಡ ಗಾಳಿಪಟವೆಂದು 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್' ನಲ್ಲಿ ದಾಖಲಾಗಿದೆ. ಫ್ರಾನ್ಸ್, ಇಟೆಲಿ, ದ.ಕೊರಿಯಾ, ಶ್ರೀಲಂಕಾ, ಗುಜರಾತ್, ರಾಜಸ್ತಾನ, ಗೋವಾ, ಸಿಲ್‌ವಾಸ ಮುಂತಾದ ಕಡೆ ಜರಗಿದ ಅಂತರರಾಷ್ಟ್ರೀಯ ಗಾಳಿಪಟ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಕತೆ, ಕವನ, ಲೇಖನ, ಕಲಾ ವಿಮರ್ಶೆಗಳನ್ನು ಬರೆಯುವ ಹೊಳ್ಳರು ಬರೆದ ಐದು ಕೃತಿಗಳು ಈಗಾಗಲೆ ಪ್ರಕಟವಾಗಿವೆ.

■ ರಂಜನಿ ಪ್ರಭು